

'ಸಾಲದ ಮಗು' ಚಿತ್ರದ ದೃಶ್ಯ

ತಮಾಷೆಯ ವಸ್ತುವಾಗುತ್ತದೆ. ಮನುಷ್ಯರ ನಡುವೆ ಪೊಳ್ಳು ಗೋಡೆಗಳನ್ನು ಶಿಕ್ಷಣ ವ್ಯವಸ್ಥೆ ರೂಪಿಸುತ್ತಿರುವ ಧ್ವನಿ 'ಮುನ್ನಿಫ'ದಲ್ಲಿದೆ.

'ಮುನ್ನಿಫ' ಮತ್ತು 'ಸಾಲದ ಮಗು' ಸಿನಿಮಾಗಳು ನಮ್ಮ ಶಿಕ್ಷಣ ವ್ಯವಸ್ಥೆ ಪುಸ್ತಕಗಳ ಚೌಕಟ್ಟಿಗೆ ಸೀಮಿತವಾದ ಕಲಿಕೆಯಾಗಿ ಪರಿಣಮಿಸಿರುವುದನ್ನೂ ಈ ಶಿಕ್ಷಣ ಮನಸುಗಳನ್ನು ಅರಳಿಸುವ ಕಲೆಯಾಗಿ ವಿಫಲವಾಗಿರುವುದನ್ನೂ ವಿಷಾದದಿಂದ ಸೂಚಿಸುತ್ತವೆ. ಕಠೋರ ವಾಸ್ತವವನ್ನು ಮುಖಕ್ಕೆ ಹಿಡಿಯುವ ನಿಟ್ಟಿನಲ್ಲಿ ನಿರ್ದೇಶಕರು ಬಳಸಿರುವ ಸಂಯಮದ ಭಾಷೆ ಕುತೂಹಲಕರವಾಗಿದೆ. ಎರಡೂ ಸಿನಿಮಾಗಳು ಸರಿ – ತಪ್ಪುಗಳ ಬಗ್ಗೆ ಮಾತನಾಡುವುದಿಲ್ಲ. 'ನಾವು ಬದುಕುತ್ತಿರುವ ಸಮಾಜ ಹೀಗಿದೆ ನೋಡಿ' ಎಂದು ಕೆಲವು ಘಟನೆಗಳನ್ನು ನಮ್ಮ ಮುಂದಿಡುತ್ತಾ, 'ಹೀಗಾಗುವುದು ಬೇಡ' ಎನ್ನುವ ಅರಿವೊಂದನ್ನು ಉಂಟುಮಾಡುವುದು ಈ ಸಿನಿಮಾಗಳ ವಿಶೇಷ ಮತ್ತು ಅಗ್ಗಳಿಕೆ.

ಇಲ್ಲಿನ ಸಂಕಟ ಬಸವ ಮತ್ತು ಸುಬ್ಬರಿಗೆ ಸೀಮಿತವಾದುದೇನೂ ಅಲ್ಲ. ಸಮಾಜದ ಕಣ್ಣಿನಲ್ಲಿ ಸುಂದರಪ್ಪ ಮುನ್ನಿಫನ ಪದವಿಯಿಂದ ಹುಚ್ಚನ ಸ್ಥಾನಕ್ಕೆ ಸಲ್ಲುವುದಕ್ಕೆ ಸಾಕ್ಷಿಯಾಗುವ ಅವನ ಪತ್ನಿಯ ಸಂಕಟ ಸಣ್ಣದೇನಲ್ಲ. ಸುಂದರಪ್ಪನಿಗೇನೊ ಬಸವ ಎನ್ನುವ ಮತ್ತೊಂದು ಆಸರೆಯಿದೆ. ಆದರೆ ಗಂಡನನ್ನೇ ನೆಚ್ಚಿಕೊಂಡ ಹೆಣ್ಣಿಗೆ ಬೇರೆ ಲೋಕವಿಲ್ಲ. ಸುಬ್ಬನ ಅಪ್ಪ ರಂಗನೊಂದಿಗೆ ಮದುವೆಯಾಗಲು ಸಾಧ್ಯವಾಗದ ಯುವತಿಯ ಚಡಪಡಿಕೆ – ಅಸಹಾಯಕತೆಯೂ ಮನಸ್ಸು ಕಲಕುವಂತಹದು. ರಂಗ ಮತ್ತು ಸುಂದರಪ್ಪ ಬದುಕು ಇನ್ನೂ ಉಳಿದಿರುವಾಗಲೇ ಲೋಕದಿಂದ ನಿರ್ಗಮಿಸುತ್ತಾರೆ. ಉಳಿದ ಈ ಹೆಣ್ಣುಗಳ ಪಾಡೇನು? ಮುನ್ನಿಫ ಚಿತ್ರದಲ್ಲಿ ಹಸುಗಳನ್ನು ನೋಡಿಕೊಳ್ಳಲು ಸುಂದರಪ್ಪನಿಗೆ ಜೊತೆಯಾಗುವ ಹಾಡಿಯ ಹೆಣ್ಣುಮಗಳು ಮುಗ್ಧ ಮಾನವೀಯ ಲೋಕದ ಪ್ರತಿನಿಧಿಯಂತಿದ್ದಾಳೆ.

'ಸಾಲದ ಮಗು' ಚಿತ್ರದಲ್ಲಿನ ರಂಗ ಹಾಗೂ 'ಮುನ್ನಿಫ'ನ ಸುಂದರಪ್ಪನಾಗಿ ನಟಿಸಿರುವ ಅಚ್ಯುತಕುಮಾರ ಎನ್ನುವ ರಾಜಕುಮಾರ ಎರಡೂ ಚಿತ್ರಗಳನ್ನು ಆವರಿಸಿಕೊಂಡಿರುವ ಪರಿ ನೋಡುಗನಲ್ಲಿ ಸಂಭ್ರಮ ಹುಟ್ಟಿಸುವಂತಿದೆ. ಜೀತಗಾರನ ದೈನ್ಯತೆ, ಮುನ್ನಿಫನ ಘನತೆ ಹಾಗೂ ಸುಂದರಪ್ಪನ ವ್ಯಸನ – ಎಲ್ಲವನ್ನೂ ಅವರು ಪ್ರೇಕ್ಷಕ ಅನುಭವಿಸುವಂತೆ ಮಾಡುತ್ತಾರೆ.